# ದುಗ್ಗಾಣಿಯ ದಾಹ ಬದುಕನ್ನು ದುಸ್ತರವಾಗಿಸುತ್ತದೆ

■ ವಿಜಯಕುಮಾರ್ ಎಚ್.ಕೆ.
ರಾಯಚೂರು

ಕೆಲವೊಮ್ಮೆ ನಮ್ಮ ತಿಳಿವಳಿಕೆಯು ಪಾತಾಳ ತಲುಪಿಬಿಡುತ್ತದೆ. ನಾವೆಂದುಕೊಂಡದ್ದು ಸುಂದರವಾಗಿರುವುದಿಲ್ಲ. ಆ ದಿನ ಅದೇ ಚೆಂದವೆನಿಸಿದರೂ ಮುಂದೆ ಜನರ ನಡುವೆ ಅದು ಮಂದಮತಿಯನ್ನಾಗಿಸುತ್ತದೆ. ಕ್ಷಣಿಕದ ಭೋಗಗಳನ್ನು ಕೊಡುವಂತಹ ಆಸೆಗಳು ನಮ್ಮ ಜೀವನಕ್ಕೆ ಬೇಡಿಯಾಗಿ ಬದುಕನ್ನು ಬಾಡಿಸಿ ಮುದುಡುವಂತೆ ಮಾಡಿ ದುಷ್ಟರನ್ನಾಗಿ ಮಾಡಿಬಿಡುತ್ತದೆ.

ನಾವು ಪರರನ್ನು ಆಶ್ರಯಿಸಿ ಬದುಕುವುದಕ್ಕಿಂತ ನಮ್ಮ ಪರಿಶ್ರಮ ಮತ್ತು ದುಡಿಮೆಯಿಂದ ಬದುಕಬೇಕು. ನಮ್ಮ ಸೇವೆಗೆ ನಾವು ಬೆಳೆಯಲು ಬೇಕಾದದ್ದನ್ನು ಈ ನಿಸರ್ಗ ಕೊಟ್ಟಾಗ ತೃಪ್ತಿಯ ಭಾವನೆ ಮೂಡುತ್ತದೆ. ನಮಗೆ ತೊಂದರೆ ನೀಡುವವರ ಬಗ್ಗೆ ಕೋಪ ವಜ್ರದಂತೆ ಗಟ್ಟಿಯಾಗಿ ಅವರನ್ನು ಕುಟ್ಟೋಣ ಅನಿಸುತ್ತೆ. ಆದರೆ ಅವರನ್ನು ಕ್ಷಮಿಸಿ ನಮ್ಮ ಕರ್ಮವನ್ನು ನಾವು ಮಾಡಿದರೆ ಅದು ನಮ್ಮನ್ನು ಬಾನೆತ್ತರಕ್ಕೆ ತಂದು ನಿಲ್ಲಿಸುತ್ತದೆ.

ಇಂತಹ ಮೇಲೆತ್ತುವ ಮೇಲ್ವಿಚಾರಕರು ಎಲ್ಲರ ಪಾಲಿಗೂ ಸಿಗುವುದಿಲ್ಲ. ಯುಧಿಷ್ಠಿರನು ಭೀಷ್ಮ ಪಿತಾಮಹರಿಂದ ತಿಳಿದ ಅನೇಕ ಉಪನ್ಯಾಸಗಳಲ್ಲಿ ಇದೂ ಒಂದು. ಇದಕ್ಕೆ ಪೂರಕವೆಂಬಂತೆ ಒಂದು ಕಥೆ 'ದುಡ್ಡೇ ದೊಡ್ಡಪ್ಪ' ಎನ್ನುವವರಿಗೆ ಭ್ರಮನಿರಸನ ಗೊಳಿಸುತ್ತದೆ.

ತುಂಬಾ ದಿನಗಳ ಹಿಂದೆ ಬಡ ವ್ಯಕ್ತಿಯೊಬ್ಬನಿದ್ದ. ಅವನು ಅರ್ಥ ಕಾಮಗಳಲ್ಲಿಯೇ ವ್ಯರ್ಥ ಆಸೆಯನಿಟ್ಟು ಬದುಕನ್ನು ಸಣ್ಣದಾಗಿಸಿಕೊಂಡಿದ್ದ. ಸದಾ ದುಗ್ಗಾಣಿಗಳಿಸುವದರಲ್ಲಿ (ಹಣ) ಮನವನಿತ್ತು ಸಂಪಾದನೆಯ ಗುಂಗಿನಲ್ಲಿ ಮರ್ಕಟನಂತೆ ಅಲೆಯುತ್ತಿದ್ದ.

ಎಷ್ಟೇ ಕಷ್ಟಪಟ್ಟರೂ ಅವನು ಮಾಡಿದ ಸಂಪಾದನೆ ಅವನು ಅಂದುಕೊಂಡ ದೊಡ್ಡಮಟ್ಟಕ್ಕೆ ತಲುಪುತ್ತಿರಲ್ಲಿಲ್ಲ. ತುಂಬ ಬಸವಳಿದು ಬೇಸತ್ತು. (ಶ್ರಮದಲ್ಲಿ ಫಲ ಬಲವಾಗದಿದ್ದಾಗ ದೈವದ ಮೊರೆ ಹೋಗುವುದು ಅನೇಕರ ಸುಲಭೋಪಾಯ). ಅಂತೆಯೇ ಆ ವ್ಯಕ್ತಿಯ ಮನಃಪಟಲದಲ್ಲಿಯೂ ಯಾವ ಅಗೋಚರ ಶಕ್ತಿಯನ್ನು ಪೂಜಿಸಿದರೆ ದೋಚಿಕೊಳ್ಳುವಷ್ಟು ಸಂಪತ್ತನ್ನು ತನ್ನ ಸ್ವತ್ತಾಗಿಸಿಕೊಳ್ಳಬಹುದೆಂಬ ಯೋಚನೆ ಬಲವಾಗಿ ಮನೆಮಾಡಿತು. ಹೀಗೆ ಯೋಚನೆಯಲ್ಲಿದ್ದಾಗಲೇ ಆಚೆ ದೇವತೆಗಳ ಅನುಚರನಾದ ಮೇಘ ಪುರುಷನನ್ನು ಮನಗಂಡು ಅವನಲ್ಲಿ ಭಕ್ತಿ ಇಟ್ಟರೆ



ಶಶಿಧರ ಹಳೇಮನಿ

ದುಗ್ಗಾಣಿ ಸಿಗಬಹುದು ಎಂದು ಭಾವಿಸಿದನು.

ಮೇಘಧರ ಎಂಬ ಹೆಸರಿನ ಅವನೇ ತನ್ನ ಬಯಕೆಗಳಿಗೆ ಆಧಾರವಾಗಬಹುದು ಎಂದು ಅವನ ನಿತ್ಯ ನಿರಂತರ ಆರಾಧನೆಗೆ ಆ ವ್ಯಕ್ತಿ ಮುಂದಾದ. ಅಪರಿಮಿತವಾದ ವಿಪರೀತ ಭಕುತಿಯನ್ನು ಸತತವಾಗಿ ಮೇಘಧರನಲ್ಲಿ ಆತ ತೋರಿಸಿದ.

ತೃಪ್ತನಾದ ಮೇಘಧರನು ಇವನಿಗೇನಾದರೂ ಮಂಗಳವನ್ನುಂಟು ಮಾಡುವ ಇಂಗಿತದಿಂದ ತನ್ನ ಶಕ್ತಿಯುತವಾದ ಅಪರೋಕ್ಷ ಜ್ಞಾನ ಮತ್ತು ತೇಜಸ್ಸನ್ನು ಒಮ್ಮೆ ಆ ವ್ಯಕ್ತಿಯ ಒಳಗಿಟ್ಟನು. ಅವನಲ್ಲಿದ್ದ ಅರ್ಥದ ಸ್ವಾರ್ಥದ ಆಸೆಯನ್ನು ತಿಳಿದು ಮರುಗಿದನು. ಅವನಿಗೆ ಉತ್ತಮವಾದದ್ದನ್ನೇ ಮಾಡಬೇಕೆಂದು ದೇವತೆಗಳ ಮುಂದೆ ಬಂದನು.

ದೇವತೆಗಳ ಅಡಿಯಲ್ಲಿ ಮುಡಿಯಿಟ್ಟು ಬೇಡಿದನು. ಮಹಾಪುರುಷಾರ್ಥಗಳಲ್ಲಿ ಮಧ್ಯಮ ಪುರುಷಾರ್ಥಗಳಲ್ಲಿಯೇ ವ್ಯರ್ಥ ಬಯಕೆಯನ್ನಿಟ್ಟುಕೊಂಡಿರುವ ಆ ಬಡ ವ್ಯಕ್ತಿಗೆ ಧರ್ಮ–ಕರ್ಮದಲ್ಲಿ ಮನವು ನೆಲೆ ನಿಲ್ಲುವಂತೆ ಬಲ್ಲವರಾದ ನೀವು ಅನುಗ್ರಹಿಸಬೇಕೆಂದು ಕೇಳಿಕೊಂಡನು. ಮೇಘಧರನ ಪ್ರಾರ್ಥನೆಯನ್ನು